# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

## ಕೇಂದ್ರ ಕಛೇರಿ : ಸಂಚಾರ ಇಲಾಖೆ : ಬೆಂಗಳೂರು

ಕರಾಸಾ:ಕೇಕ:ಸಂ:ಸಿಬ್ಬಂದಿ: 2216 :14-15

ದಿನಾಂಕ :07.07.2014

### ಸುತ್ತೋಲೆ ಸಂಖ್ಯೆ : 1228

(ಸಂಚಾರ ಇಲಾಖೆಯಿಂದ ಹೊರಡಿಸಲಾಗಿದೆ)

ವಿಷಯ: ರಾಜ್ಯದ ನಾಲ್ಕು ರಸ್ತೆ ಸಾರಿಗೆ ನಿಗಮಗಳ ಸಾಮಾನ್ಯ ಮತ್ತು ವೇಗದೂತ ಬಸ್ಸುಗಳಲ್ಲಿ ನಿಗಮದ ನಿವೃತ್ತ ಅಧಿಕಾರಿ/ನೌಕರರಿಗೆ ಉಚಿತವಾಗಿ ಪ್ರಯಾಣಿಸಲು ಅನುಮತಿಸುವ ಕುರಿತು.

ಉಲ್ಲೇಖ: 1) ಮಂಡಳಿ ಠರಾವು ಸಂಖ್ಯೆ 9463, ದಿನಾಂಕ : 20.02.2013.
2) ಸುತ್ತೋಲೆ ಸಂಖ್ಯೆ 1167, ಕರಾಸಾ/ಕೇಕ/ಸಂ/ಸಿಬ್ಬಂದಿ/8876/12-13, ದಿನಾಂಕ : 19.03.2013.
3) ಮಂಡಳಿ ಠರಾವು ಸಂಖ್ಯೆ 9564, ದಿನಾಂಕ : 07.06.2014.

\- - -

ಪ್ರಸ್ತುತ ನಿಗಮದಲ್ಲಿ ನಿವೃತ್ತಿಯಾಗುವ ನೌಕರರು ಕೆಳಕಂಡ ಸೌಲಭ್ಯಗಳಿಗೆ ಅರ್ಹರಿರುತ್ತಾರೆ.

1. ದಿನಾಂಕ.27.09.1981 ರ ಕೈಗಾರಿಕಾ ಒಪ್ಪಂದದ ಕ್ಲಾಸ್ 9 (ii) ಪ್ರಕಾರ ದಿನಾಂಕ.01.01.1980 ರಂದು ಮತ್ತು ನಂತರದಲ್ಲಿ ನಿವೃತ್ತರಾಗುವ ನೌಕರರು, ನಿವೃತ್ತರಾದ ನಂತರ 5 ವರ್ಷಗಳ ವರೆಗೆ ಕುಟುಂಬ ಪಾಸ್‌ಗೆ ಅರ್ಹರಿರುತ್ತಾರೆ. ನಿವೃತ್ತ ನೌಕರ/ನೌಕರಳು ಆತನ/ಆಕೆಯ ಪತ್ನಿ/ಪತಿಯೊಂದಿಗೆ ಕ್ಯಾಲೆಂಡರ್ ವರ್ಷದಲ್ಲಿ ಒಮ್ಮೆ ನಿಗಮದ ಬಸ್ಸುಗಳು ಕಾರ್ಯಾಚರಣೆಯಾಗುವ ಯಾವುದೇ ಸ್ಥಳಗಳಿಗೆ ಪ್ರಯಾಣಿಸಲು ಅರ್ಹರಿರುತ್ತಾರೆ.

2. ದಿನಾಂಕ.17.07.1989ರ ಕೈಗಾರಿಕಾ ಒಪ್ಪಂದದ ಪ್ರಕಾರ ದಿನಾಂಕ.01.01.1988 ಮತ್ತು ನಂತರ ನಿವೃತ್ತರಾದ/ ನಿವೃತ್ತರಾಗಲಿರುವ ನೌಕರರು ನಗರ ಸಾರಿಗೆ ಕಾರ್ಯಾಚರಣೆ ಮಾಡುವ ಸ್ಥಳದಲ್ಲಿ ವಾಸವಾಗಿದ್ದ ಪಕ್ಷದಲ್ಲಿ, ನಗರ ಸಾರಿಗೆಯಲ್ಲಿ ಪ್ರಯಾಣಿಸಲು ಉಚಿತ ಪಾಸ್‌ಗೆ ಅರ್ಹರಿರುತ್ತಾರೆ.

ಉಲ್ಲೇಖ (2) ರಂತೆ ನಿಗಮದ ಸಾಮಾನ್ಯ ಮತ್ತು ವೇಗದೂತ ಸಾರಿಗೆಗಳಲ್ಲಿ ಶೇಕಡ 50 ರಷ್ಟು ರಿಯಾಯಿತಿ ದರದಲ್ಲಿ ಪ್ರಯಾಣಿಸಲು ಅವಕಾಶ ಕಲ್ಪಿಸಲಾಗಿತ್ತು.

ಪ್ರಸ್ತುತ ನಿಗಮದ ನಿವೃತ್ತ ಅಧಿಕಾರಿ/ನೌಕರರಿಂದ ರೂ 500.00 ನ್ನು ಪಡೆದು ಸಾಮಾನ್ಯ ಮತ್ತು ವೇಗದೂತ ಸಾರಿಗೆಗಳಲ್ಲಿ ಉಚಿತವಾಗಿ ಪ್ರಯಾಣಿಸಲು ಬಸ್‌ಪಾಸ್ ನೀಡಲು ಅವಕಾಶ ಕಲ್ಪಿಸಲಾಗಿದೆ.

**ಉಲ್ಲೇಖ (3) ರ ತೀರ್ಮಾನದಂತೆ ಉಚಿತ ಬಸ್‌ಪಾಸ್ ವಿತರಿಸುವ ಕುರಿತು ಈ ಕೆಳಕಂಡ ನಿರ್ದೇಶನಗಳನ್ನು ನೀಡಲಾಗಿದೆ.**

1. ರಾಜ್ಯದ ನಾಲ್ಕು ರಸ್ತೆ ಸಾರಿಗೆ ನಿಗಮಗಳ ನಿವೃತ್ತ ಅಧಿಕಾರಿ/ನೌಕರರು ಅವರು ನಿವೃತ್ತಿ ಹೊಂದಿರುವ ವಿಭಾಗ/ಕಾರ್ಯಸ್ಥಾನದಲ್ಲಿಯೇ ರೂ 500.00 ಪರಿಷ್ಕರಣಾ ಶುಲ್ಕವನ್ನು ಪಾವತಿಸಿ ನಿವೃತ್ತ ನೌಕರರ ಉಚಿತ ಬಸ್‌ಪಾಸ್‌ನ್ನು ಪಡೆದುಕೊಳ್ಳತಕ್ಕದ್ದು. ಒಂದು ವೇಳೆ ನಿವೃತ್ತಿ ಹೊಂದಿದ ಅಧಿಕಾರಿ/ನೌಕರರ ವಾಸಸ್ಥಳ ಬೇರೆಯಾಗಿದ್ದಲ್ಲಿ ಈ ವಿಷಯವನ್ನು ಶಾಖಾ ಮುಖ್ಯಸ್ಥರ ಗಮನಕ್ಕೆ ತಂದು ನಿವೃತ್ತಿ ಹೊಂದಿದ ವಿಭಾಗ/ಕಾರ್ಯಸ್ಥಳದಿಂದ ಪಡೆದ ನಿವೃತ್ತಿ ಆದೇಶ ಹಾಗೂ ವಾಸಸ್ಥಳದ ಬಗ್ಗೆ ದೃಢೀಕೃತ ದಾಖಲೆಗಳನ್ನು ಒದಗಿಸಿ ವಾಸಸ್ಥಳ ವ್ಯಾಪ್ತಿಯ ವಿಭಾಗ/ಸ್ಥಾನಿಕ ಕಛೇರಿಯಿಂದ ಉಚಿತ ಬಸ್‌ಪಾಸ್‌ನ್ನು ಪಡೆಯಬಹುದಾಗಿದೆ.

..2...

2. ನಿಗಮದ ಸೇವೆಯಿಂದ ನಿವೃತ್ತಿ ಹೊಂದಿರುವ ಅಧಿಕಾರಿ/ನೌಕರರು ಮಾತ್ರ ಈ ಬಸ್‌ಪಾಸ್‌ನ್ನು ಪಡೆಯಲು ಅರ್ಹರಿರುತ್ತಾರೆ. ಅಂತಹ ನಿವೃತ್ತ ಅಧಿಕಾರಿ/ನೌಕರರಿಗೆ ಉಚಿತವಾಗಿ ಸಾಮಾನ್ಯ ಹಾಗೂ ವೇಗದೂತ ಸಾರಿಗೆಗಳಲ್ಲಿ ಮಾತ್ರ ಪ್ರಯಾಣಿಸಲು ಅವಕಾಶ ಕಲ್ಪಿಸಲಾಗಿದೆ.

3. ನಿವೃತ್ತ ಅಧಿಕಾರಿ/ನಿವೃತ್ತ ನೌಕರರು ಸೇವೆಯಿಂದ ನಿವೃತ್ತಿ ಹೊಂದಿರುವ ಸಂಬಂಧ ಹೊರಡಿಸಲಾದ ಸಿಬ್ಬಂದಿ ಆದೇಶ ಮತ್ತು ಅವರ ಒಂದು ಪಾಸ್‌ಪೋರ್ಟ್ ಹಾಗೂ ಒಂದು ಸ್ಟಾಂಪ್ ಅಳತೆಯ ಭಾವಚಿತ್ರದ ಸಮೇತ ಅರ್ಜಿಯನ್ನು ವಿಭಾಗನಿಯಂತ್ರಣಾಧಿಕಾರಿ/ಶಾಖಾ ಮುಖ್ಯಸ್ಥರಿಗೆ ಸಕಾಲದಲ್ಲಿ ರೂ ೫೦೦.೦೦ ಪರಿಷ್ಕರಣಾ ಶುಲ್ಕದೊಂದಿಗೆ ಸಲ್ಲಿಸತಕ್ಕದ್ದು.

4. ನಿವೃತ್ತ ಅಧಿಕಾರಿಗಳು/ನೌಕರರಿಂದ ಹೊಸದಾಗಿ/ಮೊದಲ ಬಾರಿ ಬಸ್‌ಪಾಸ್‌ನ್ನು ಪಡೆಯುವ ಬಗ್ಗೆ ಅರ್ಜಿ ಬಂದಾಗ ಅವರ ನಿವೃತ್ತಿ ಸಿಬ್ಬಂದಿ ಆದೇಶದ ಮೂಲ ದಾಖಲೆಗಳನ್ನು ವಿಭಾಗದ/ ಕೇಂದ್ರ ಕಛೇರಿಯ ಆಯಾ ಇಲಾಖೆಯ ಸಿಬ್ಬಂದಿ ಶಾಖೆಯಲ್ಲಿ ಪರಿಶೀಲಿಸಿ ಅರ್ಜಿದಾರರು ನಿಗಮದ ಸೇವೆಯಿಂದ ನಿವೃತ್ತಿ ಹೊಂದಿರುವ ಬಗ್ಗೆ ಖಚಿತಪಡಿಸಿಕೊಂಡು ಸಂಬಂಧಿಸಿದ ಅಧಿಕಾರಿಯವರು ಮೊಹರು ಸಮೇತ ದೃಢೀಕರಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ವಿಭಾಗದ/ಕೇಂದ್ರ ಕಛೇರಿಯ ಸಂಚಾರ ಇಲಾಖೆಗೆ ಕಳುಹಿಸುವುದು ಮತ್ತು ತತ್ಸಂಬಂಧ ಆಯಾ ಶಾಖೆಯಲ್ಲಿ ಅವಶ್ಯ ದಾಖಲಾತಿಯನ್ನು ಇಟ್ಟುಕೊಳ್ಳುವುದು.

5. ಸಂಚಾರ ಇಲಾಖೆಯಲ್ಲಿ ಒಂದು ನೊಂದಣಿ ಪುಸ್ತಕ ಇಟ್ಟು, ಗುರುತಿನ ಚೀಟಿ ನೀಡುವಾಗ ಕ್ರಮ ಸಂಖ್ಯೆ ೩ ಮತ್ತು ೪ ರಲ್ಲಿ ತಿಳಿಸಿರುವ ದಾಖಲೆಗಳೊಂದಿಗೆ, ನಿವೃತ್ತ ನೌಕರರ ಹೆಸರು, ಮನೆ ವಿಳಾಸ, ದೂರವಾಣಿ ಸಂಖ್ಯೆ, ಅವರಿಗೆ ವಿತರಿಸಿರುವ ಬಸ್‌ಪಾಸ್ ಸಂಖ್ಯೆ, ಚಾಲ್ತಿ ದಿನಾಂಕ ಇತ್ಯಾದಿಗಳನ್ನು ನಮೂದಿಸಿ ಪಕ್ಕದಲ್ಲಿ ನಿವೃತ್ತ ನೌಕರ ಭಾವಚಿತ್ರವನ್ನು ಅಂಟಿಸಿ ಮೊಹರು ಸಮೇತ ದೃಢೀಕರಿಸುವುದು. ನಂತರ ಬಸ್‌ಪಾಸ್ ವಿತರಿಸುವುದು ಹಾಗೂ ಬಸ್‌ಪಾಸ್ ನೀಡಿರುವ ಬಗ್ಗೆ ನೊಂದಣಿ ಪುಸ್ತಕದಲ್ಲಿ ಸಹಿ ಪಡೆದುಕೊಳ್ಳುವುದು.

6. ನಿವೃತ್ತ ಅಧಿಕಾರಿ/ನೌಕರರ ಬಸ್‌ಪಾಸ್ ನಮೂನೆಯನ್ನು ಸಿದ್ಧಪಡಿಸಿ ಕರಾಸಾ ಮುದ್ರಣಾಲಯಕ್ಕೆ ನೀಡಿದ್ದು, ರಾಜ್ಯದ ನಾಲ್ಕು ನಿಗಮಗಳ ಮುಖ್ಯ ಸಂಚಾರ ವ್ಯವಸ್ಥಾಪಕರುಗಳು ಅವಶ್ಯಕತೆಗೆ ಅನುಗುಣವಾಗಿ ಮುದ್ರಿತ ಬಸ್‌ಪಾಸ್‌ಗಳನ್ನು ಪಡೆದು ಆಯಾಯ ನಿಗಮದ ವಿಭಾಗಗಳಿಗೆ ವಿತರಿಸುವುದು ಮತ್ತು ವಿತರಿಸಿದ ಬಗ್ಗೆ ಪ್ರತ್ಯೇಕ ದಾಖಲಾತಿ ಇಡುವುದು. ಅಲ್ಲದೆ, ನಿಗಮವಾರು ಪ್ರತಿ ವರ್ಷ ಹೊಸದಾಗಿ ನೀಡಿರುವ ಬಸ್‌ಪಾಸ್‌ಗಳ ವಿವರ ಹಾಗೂ ರದ್ದುಪಡಿಸಿರುವ ವಿವರ ಇತ್ಯಾದಿಗಳ ಬಗ್ಗೆ ಸಹ ದಾಖಲೆಗಳನ್ನು ಇಡುವುದು.

7. ನಿವೃತ್ತ ಅಧಿಕಾರಿ/ ನೌಕರರು ಒಮ್ಮೆ ನೀಡಿದ ಬಸ್‌ಪಾಸ್‌ನ್ನು ಕಳೆದುಕೊಂಡ ಪಕ್ಷದಲ್ಲಿ ತತ್ಸಂಬಂಧ ವ್ಯಾಪ್ತಿಯ ಆರಕ್ಷಕ ಠಾಣೆಯಲ್ಲಿ ದೂರು ದಾಖಲಿಸುವುದು ಮತ್ತು ಮುಂದಿನ ಮೂರು ತಿಂಗಳ ಅವಧಿಯೊಳಗಾಗಿ ಸದರಿ ಗುರುತಿನ ಚೀಟಿ ಪತ್ತೆಯಾಗದೇ ಇದ್ದ ಪಕ್ಷದಲ್ಲಿ ತತ್ಸಂಬಂಧ ಆರಕ್ಷಕ ಠಾಣೆಯಿಂದ ಪಡೆದ ಪತ್ರ ಸಮೇತ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ನಕಲು ಬಸ್‌ಪಾಸ್‌ನ್ನು

ನೀಡುವಾಗ ಮೊದಲ ಬಾರಿ ರೂ. 500/-ಗಳನ್ನು ಹಾಗೂ ಎರಡನೇ ಬಾರಿ ಹಾಗೂ ಎರಡಕ್ಕಿಂತ ಹೆಚ್ಚಿನ ಬಾರಿ ಬಸ್‌ಪಾಸ್ ಕಳೆದುಕೊಂಡಲ್ಲಿ ಪ್ರತಿ ಬಾರಿ ರೂ. 1000/- ಗಳನ್ನು ದಂಡದ ರೂಪದಲ್ಲಿ ಸಂಬಂಧಪಟ್ಟ ನಿವೃತ್ತ ಅಧಿಕಾರಿ/ನೌಕರರಿಂದ ಪಡೆದು ನಕಲು ಬಸ್‌ಪಾಸ್‌ನ್ನು ನೀಡಲು ಅವಕಾಶ ಕಲ್ಪಿಸಲಾಗಿದೆ. ಈ ಸಂಬಂಧ ಸಂಬಂಧಪಟ್ಟ ದಾಖಲಾತಿಯಲ್ಲಿ ಪೂರಕ ಷರಾ ನಮೂದಿಸುವುದು.

ಮೇಲ್ಕಂಡ ನಿರ್ದೇಶನಗಳು ತಕ್ಷಣದಿಂದ ಜಾರಿಗೆ ಬರಲಿದೆ ಮತ್ತು ಈ ಸುತ್ತೋಲೆಯ ಪ್ರತಿಯನ್ನು ನಾಲ್ಕು ನಿಗಮಗಳ ಕೇಂದ್ರ ಕಛೇರಿ/ ಎಲ್ಲಾ ಘಟಕ/ ವಿಭಾಗೀಯ ಕಚೇರಿ/ ವಿಭಾಗೀಯ ಕಾರ್ಯಾಗಾರ/ ಬಸ್ ನಿಲ್ದಾಣ/ ಪ್ರಾದೇಶಿಕ ಕಾರ್ಯಾಗಾರಗಳ ಸೂಚನಾ ಫಲಕದಲ್ಲಿ ಪ್ರಕಟಿಸಿ ನೌಕರರ ಗಮನಕ್ಕೆ ತರುವುದು.

ಸುತ್ತೋಲೆ ಸಂಖ್ಯೆ : 1167, ಕರಾಸಾ/ಕೇಕ/ಸಂ/ಸಿಬ್ಬಂದಿ/ 8876 /12-13, ದಿನಾಂಕ : 19.03.2013 ನ್ನು ಈ ಕೂಡಲೇ ಜಾರಿಗೆ ಬರುವಂತೆ ಹಿಂಪಡೆಯಲಾಗಿದೆ.

ವ್ಯವಸ್ಥಾಪಕ ನಿರ್ದೇಶಕರು

ಪ್ರತಿಯನ್ನು:

ವ್ಯವಸ್ಥಾಪಕ ನಿರ್ದೇಶಕರು, ಬೆಂಮನಸಾಸಂಸ್ಥೆ, ಈಕರಸಾಸಂಸ್ಥೆ, ವಾಕರಸಾಸಂಸ್ಥೆ ರವರ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ.

ಎಲ್ಲಾ ಹಿರಿಯ/ವಿಭಾಗೀಯ ನಿಯಂತ್ರಣಾಧಿಕಾರಿಗಳು/ ಕಾರ್ಯ ವ್ಯವಸ್ಥಾಪಕರು/ ಕಾರ್ಯ ನಿರ್ವಾಹಕ ಅಭಿಯಂತರರು/ ಪ್ರಾಂಶುಪಾಲರು ಕರಾರಸಾನಿಗಮ, ಬೆಂಮಸಾಸಂಸ್ಥೆ, ವಾಕರಸಾಸಂಸ್ಥೆ, ಈಕರಸಾಸಂಸ್ಥೆ ರವರ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮ್ಕಕಾಗಿ.

ಮುಖ್ಯ ಸಂಚಾರ ವ್ಯವಸ್ಥಾಪಕರು, ಬೆಂಮಸಾಸಂಸ್ಥೆ/ ವಾಕರಸಾಸಂಸ್ಥೆ/ ಈಕರಸಾ ಸಂಸ್ಥೆ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.

ಎಲ್ಲಾ ಇಲಾಖಾ ಮುಖ್ಯಸ್ಥರು, ಕರಾರಸಾ ನಿಗಮ, ಕೇಂದ್ರ ಕಛೇರಿ, ಬೆಂಗಳೂರು. ಇವರ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮ್ಕಕಾಗಿ.

ಮುದ್ರಣ ಮತ್ತು ಲೇಖನ ಸಾಮಗ್ರಿ ನಿಯಂತ್ರಣಾಧಿಕಾರಿ, ಕರಾಸಾ ಮುದ್ರಣಾಲಯ, ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.

ಅಧ್ಯಕ್ಷರು/ ವ್ಯವಸ್ಥಾಪಕ ನಿರ್ದೇಶಕರು/ ನಿರ್ದೇಶಕರು(ಸಿ:ಪ)/ ನಿರ್ದೇಶಕರು(ಭ:ಜಾ) ರವರ ಹಿರಿಯ ಆಪ್ತ ಕಾರ್ಯದರ್ಶಿ/ಆಪ್ತ ಕಾರ್ಯದರ್ಶಿಗಳು, ಕರಾರಸಾ ನಿಗಮ, ಕೇಕ, ಬೆಂಗಳೂರು ರವರ ಮಾಹಿತಿಗಾಗಿ.